ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 5, Mar-Apr, 2023, Pp. 83-94.
©*IIMRD*, Mysuru
www.iimrd.com

# ಮಹಿಳಾ ಹರಿದಾಸರು: ಒಂದು ಅವಲೋಕನ

**ಡಾ.ಎಲ್.ಪಿ.ರಾಜು***

*ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

***ಸಾರಾಂಶ: (Abstract)***

*ಜಗತ್ತಿನ ಎಲ್ಲಾ ಆಗುಹೋಗುಗಳನ್ನು ನಿಯಂತ್ರಿಸುವ ಶಕ್ತಿಯನ್ನು ಭಗವಂತನೆಂದು ಆತನ ಎದುರಿನ ದಾಸ್ಯವೇ ಭಕ್ತಿಯೆಂದು ಮನುಷ್ಯ ವಲಯದಲ್ಲಿರುವ ನಂಬಿಕೆ. ಪ್ರಾಗೈತಿಹಾಸಿಕ ಸಂಶೋಧನೆಗಳಿಂದ ತಿಳಿದುಬಂದಂತೆ ಎಲ್ಲಾ ನಾಗರಿಕತೆಗಳಲ್ಲಿ ಭಕ್ತಿಯಿಂದ ಭಗವಂತನನ್ನು ಆರಾಧಿಸುವುದಕ್ಕೆ ಅನೇಕ ಸಾಕ್ಷಿಗಳು ದೊರೆತಿವೆ. ಭಾರತವೂ ಇದರಿಂದ ಹೊರತಾಗಿ ಉಳಿದಿಲ್ಲ. ಸಿಂಧೂ ನಾಗರೀಕತೆಯಿಂದ ಆರಂಭಿಸಿ ಸಮಕಾಲೀನದವರೆಗೂ ಭಗವಂತನ ನಿರಂತರ ಆರಾಧನೆ ಅದಕ್ಕೆ ಪೂರಕವಾಗಿ ಭಕ್ತಿಯ ಅಸ್ತಿತ್ವವನ್ನು ಗಮನಿಸಬಹುದಾಗಿದೆ. ಭಕ್ತಿಯ ತತ್ವವನ್ನು ಪ್ರಚುರಪಡಿಸಿದ ಮಹಾನುಭಾವರಲ್ಲಿ ಅನೇಕ ಋಷಿಮುನಿಗಳು, ಸಂತರು, ಶರಣರು, ಹರಿದಾಸರು ಮತ್ತು ಆಧುನಿಕ ಭಾರತದ ಸಮಾಜಸುಧಾರಕರು ಪ್ರಮುಖರು.*

***ಮುಖ್ಯಪದಗಳು: (Keywords)*** *ದಾಸ ಸಾಹಿತ್ಯ, ಹರಿದಾಸ ಪರಂಪರೆ, ಮಹಿಳಾ ಹರಿದಾಸರು, ಭಕ್ತಿಯುಗ.*

**ಪೀಠಿಕೆ**

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬೌದ್ಧ, ಜೈನ, ವೈಷ್ಣವ ಹಾಗೂ ಶೈವ ಧರ್ಮಗಳ ಬೆಳವಣಿಗೆ, ಅವುಗಳೊಂದಿಗೆ ಭಕ್ತಿಯ ಪ್ರವರ್ಧನೆ ಸಹಜವಾಗಿಯೇ ಗಮನಿಸಬಹುದಾಗಿದೆ. 15ನೆಯ ಶತಮಾನವನ್ನು ಭಕ್ತಿಯುಗ ಎಂದು ಕರೆಯಲಾಗುತ್ತದೆ. ಮಧ್ಯಯುಗದ ಇತಿಹಾಸದ ಈ ಕಾಲಘಟ್ಟವು ಭಕ್ತಿಪಂಥದ ಹುಟ್ಟುವಿಕೆಗೆ ಕಾರಣವಾಯಿತು. ಭಕ್ತಿ ಸೂತ್ರದ ಆಧಾರದ ಮೇಲೆ ಕರ್ನಾಟಕದ ನೆಲೆಯಲ್ಲಿ ಕಾಣಿಸಿಕೊಂಡ ಭಕ್ತಿಪಂಥ ಹರಿದಾಸರದು. ಮಧ್ವಚಾರ್ಯರ ದ್ವೈತ ಸಿದ್ಧಾಂತದ ತಳಹದಿಯ ಮೇಲೆ ರೂಪಿತವಾದ ಭಕ್ತಿತತ್ವ ಇವರದಾಗಿತ್ತು. 14ನೆಯ ಶತಮಾನದ ವೇಳೆಗೆ ಸಾಕಷ್ಟು ಬೆಳೆದಿದ್ದ ಸಾಮಾಜಿಕ ಭಿನ್ನಾಭಿಪ್ರಾಯಗಳು, ಧಾರ್ಮಿಕ ಭಿನ್ನಾಭಿಪ್ರಾಯಗಳಿಂದ ಮೇಲು ಕೀಳು ಭಾವನೆಗಳು ಉಲ್ಬಣಿಸಿದ್ದವು. ಈ ಆಂತರಿಕ ಕ್ಷೋಭೆಗಳೊಂದಿಗೆ ಮುಸಲ್ಮಾನರ ಎಡೆಬಿಡದ ದಾಳಿಗಳು, ದರೋಡೆ, ಲೂಟಿ, ಬಲಾತ್ಕಾರಗಳು, ಒತ್ತಾಯದ ಮತಾಂತರಗಳು ಸಮಾಜದ ದಿಕ್ಕು ತಪ್ಪಿಸಿದ್ದವು. ಇದೇ ಸಮಯದಲ್ಲಿ ಹುಟ್ಟಿದಂತಹ ವಿಜಯನಗರದ ಸಾಮ್ರಾಜ್ಯವು ಹಿಂದೂ ಧರ್ಮದ ರಕ್ಷಕನಂತೆ ನೆಮ್ಮದಿಯ ವಾತಾವರಣವನ್ನು ಸ್ಥಾಪಿಸಿತು. ಈ ಅವಧಿಯಲ್ಲಿ ಕರ್ನಾಟಕದ ಹರಿದಾಸ ಪರಂಪರೆಯು ತನ್ನ ಬೆಳವಣಿಗೆಯನ್ನು ಕಂಡುಕೊಂಡಿತು. ಈ

*Please cite this article as: ಡಾ.ಎಲ್.ಪಿ.ರಾಜು.* (2023). ಮಹಿಳಾ ಹರಿದಾಸರು: ಒಂದು ಅವಲೋಕನ. *ಪ್ರತಿಬಿಂಬ:ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 83–94.*

ಪರಂಪರೆಗೆ ಆಶ್ರಯವಿತ್ತು ಬೆಳೆಸಿದವರು ವಿಜಯನಗರದ ಅರಸರು ಎಂಬುದು ಗಮನಾರ್ಹ. ಮಧ್ವಚಾರ್ಯರ ಶಿಷ್ಯರಾದ ಶ್ರೀಪಾದರಾಜರಿಂದ ಪ್ರಾರಂಭವಾದ ಹರಿದಾಸ ಪರಂಪರೆಯು ಸುಮಾರು 18ನೆಯ ಶತಮಾನದವರೆಗೂ ಅನೇಕ ಹರಿದಾಸರು ಮತ್ತು ಅವರ ಸಾಹಿತ್ಯದಿಂದ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ.

**ದಾಸ ಸಾಹಿತ್ಯದ ಕೊಡುಗೆಗಳು**

ಕನ್ನಡ ಸಾಹಿತ್ಯ, ಸಂಗೀತ ಸಂಸ್ಕೃತಿಗೆ ದಾಸಸಾಹಿತ್ಯದ ಕೊಡುಗೆ ಅಮೂಲ್ಯ ಮತ್ತು ಅಪಾರ. ಹರಿದಾಸರು ತಮ್ಮ ರಚನೆಗಳಿಂದ ಸಮಾಜವನ್ನು ತಿದ್ದುವ ಪರಿ ನಿಜಕ್ಕೂ ಗಮನಾರ್ಹವಾದುದು. ಶ್ರೇಷ್ಠಮಟ್ಟದ ಗೇಯ ಗುಣವನ್ನು ಹೊಂದಿರುವ ಹರಿದಾಸ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿದೆ. ಹರಿಸರ್ವೋತ್ತಮ ಎಂದು ನಂಬಿದ, ಸಂಸ್ಕೃತ ಹಾಗೂ ಕನ್ನಡ ಎರಡರಲ್ಲೂ ಪಾಂಡಿತ್ಯವುಳ್ಳ ಹರಿದಾಸರು ಪ್ರತಿಭಾನ್ವಿತ ವಾಗ್ಗೇಯಕಾರರು ಹಾಗೂ ಅನುಭಾವಿ ಕವಿಗಳು. ಪ್ರಾಪಂಚಿಕ ವ್ಯಾಮೋಹದಿಂದ ಮುಕ್ತರಾಗಿ ಆಧ್ಯಾತ್ಮದತ್ತ ಒಲವು ಬೆಳಸಿಕೊಂಡು, ಜೊತೆಗೆ ಲೋಕೋದ್ಧಾರದ ಬಗ್ಗೆಯೂ ಚಿಂತಿಸಿದರು. ಇವರ ಕೀರ್ತನ ಸಾಹಿತ್ಯವು ಬದುಕಿನಲ್ಲಿ ಯಾವ ಕಠಿಣತೆ ಇಲ್ಲದೆ, ಮತೀಯ ಜಂಜಾಟವಿಲ್ಲದೆ ಮುಕ್ತಿಗಳಿಸಲು ಸಹಕಾರಿಯಾಯಿತು. ಕೀರ್ತನೆಗಳು ಸಾಮಾನ್ಯ ವ್ಯಕ್ತಿಯೂ ಅರ್ಥೈಸಿಕೊಳ್ಳಬಹುದಾದ ಸರಳ ಭಾಷಾಶೈಲಿಯಾಗಿದ್ದು ಅಂದರೆ ಕನ್ನಡದಲ್ಲಿದ್ದು ಯಾವುದೇ ಭಾಷಾ ವೈಭವವಿಲ್ಲದೆ ಸರಳತೆಯಿಂದ ಗಮನ ಸೆಳೆಯುವಂತಹವಾಗಿವೆ. ಅವರ ಸಾಹಿತ್ಯವನ್ನು ಗಮನಿಸಿದಾಗ ಹರಿದಾಸರು ಖಂಡಿತವಾಗಿಯೂ ನಾಡಿನ ಸಾಂಸ್ಕೃತಿಕ ರಾಯಭಾರಿಗಳಂತೆ ಕಂಡುಬರುತ್ತಾರೆ. ಕಾಲಿಗೆ ಗೆಜ್ಜೆಕಟ್ಟಿ ತಾಳ ತಂಬೂರಿಗಳನ್ನು ಹಿಡಿದು ಹಾಡುತ್ತಾ ಕುಣಿಯುತ್ತಾ ಸಮಾಜದಲ್ಲಿ ಮೌಲ್ಯಗಳನ್ನು ಬಿತ್ತುವ ಕೃಷಿಕರಂತೆ ಶ್ರಮಿಸಿದ್ದಾರೆ. ಮೌಢ್ಯಗಳನ್ನು ನಿವಾರಿಸುವ ಸುಧಾರಕರೆನಿಸಿಕೊಂಡಿದ್ದಾರೆ.

ಹರಿದಾಸರು ಎಂದಾಕ್ಷಣ ಸಾಮಾನ್ಯವಾಗಿ ಪುರುಷರಷ್ಟೇ ಹರಿದಾಸರು ಎಂಬ ಭಾವನೆಯಿಂದ ಹೊರಬರುವುದು ಉತ್ತಮ. ವಿಶೇಷವಾಗಿ ಹರಿದಾಸರ ಇತಿಹಾಸವನ್ನು ಗಮನಿಸಿದಾಗ ಪುರಂದರದಾಸರು, ಕನಕದಾಸರು ಇತ್ಯಾದಿಯಾಗಿ ಪುರುಷ ಹರಿದಾಸರು ಸಂಖ್ಯೆಯಲ್ಲಿ ಹೆಚ್ಚಿದ್ದರೂ ಅನೇಕ ಮಹಿಳಾ ಹರಿದಾಸರೂ ಗಮನ ಸೆಳೆಯುತ್ತಾರೆ. ಮಹಿಳಾ ಹರಿದಾಸರು ವಿರಳವಾಗಿದ್ದರೂ ಅವರ ಸಾಧನೆಗಳತ್ತ ಗಮನಹರಿಸಿದರೆ ಅವರ ಭಕ್ತಿಯ ತತ್ಪರತೆ, ಸಮಾಜಮುಖಿ ರಚನೆಗಳು, ಚಿಂತನೆಗಳಿಂದ ಭಾರತದ ಧಾರ್ಮಿಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುತ್ತಾರೆ.

**ಮಹಿಳಾ ಹರಿದಾಸರು**

ಹರಿದಾಸ ಪಂಥವು ಭಕ್ತಿ ಪಂಥದ ಭಾಗವಾಗಿ ಗಮನಿಸಬಹುದಾಗಿದ್ದು **ಮೀರಾಬಾಯಿ** ಈ ಭಕ್ತಿ ಪಂಥದ ಮೊದಲ ಮಹಿಳಾ ಹರಿದಾಸಿಯಾಗಿ ಗುರುತಿಸಬಹುದು. ಬಾಲ್ಯದಿಂದ ಕೃಷ್ಣನನ್ನೇ ಪತಿಯೆಂದು ಮನದಾಳದಲ್ಲಿ ಸ್ವೀಕರಿಸಿದ ಈಕೆ, ಸಂಸಾರದ ನಿಯಮದಂತೆ ಭೋಜರಾಜನನ್ನು ವಿವಾಹವಾದಳು. ಚಿಕ್ಕವಯಸ್ಸಿನಲ್ಲೇ ವಿಧವಾ ಪಟ್ಟವನ್ನು ಹೊರಬೇಕಾಯಿತು. ಭೋಜರಾಜ ಲೌಕಿಕ ಪತಿಯ ಸ್ಥಾನದಲ್ಲಿದ್ದರೂ, ಆಕೆ ಗಿರಿಧರ ಗೋಪಾಲನೇ ನಿಜವಾದ ಪತಿಯೆಂದು ಆತನಿಗೆ ಆತ್ಮಾರ್ಪಣೆ ಮಾಡಿಕೊಂಡವಳು. ಮೀರಾಬಾಯಿ ಅನೇಕ ಕೀರ್ತನೆಗಳನ್ನು ರಚಿಸಿ ಹಾಡುತ್ತಾ, ಕೃಷ್ಣನ ನೋಡುವ ತವಕವನ್ನು

ಅಭಿವ್ಯಕ್ತಗೊಳಿಸುತ್ತಾಳೆ, ಒಂದೆಡೆ ಭಕ್ತಿಯ ಪ್ರತಿಪಾದನೆಯಾದರೆ, ಮತ್ತೊಂದೆಡೆ ಭವಸುಖಗಳಿಗಿಂತ 'ಮೋಕ್ಷ ಮಾರ್ಗದ' ಪ್ರಾಧಾನ್ಯತೆಗೆ ಗಮನವಿರಬೇಕೆಂಬುದು ಈಕೆಯ ರಚನೆಗಳಲ್ಲಿ ಗಮನಿಸುವ ಪ್ರಮುಖ ಅಂಶಗಳು. ಅಳ್ವಾರರಲ್ಲಿ **ಅಂಡಾಳಳ** ಭಕ್ತಿಯೂ ಮೀರಾಬಾಯಿಯಂತೆಯೇ ಕೃಷ್ಣನ ಆರಾಧಕಳಾಗಿ ಹರಿದಾಸಿಯ ಸ್ಥಾನದಲ್ಲಿ ಕಂಡುಬರುತ್ತಾಳೆ. ಈಕೆಯೂ ಹರಿಯನ್ನೇ ಪತಿಯೆಂದು ಸ್ವೀಕರಿಸಿ, ಕೀರ್ತನೆಗಳನ್ನು ರಚಿಸಿ ಹಾಡುತ್ತಾ ಭಕ್ತಿಯ ನಿವೇದನೆಗೈಯುತ್ತಾಳೆ. ಭಕ್ತಿಯ ಪ್ರಾಧಾನ್ಯತೆ ಅದರೊಂದಿಗೆ ಭಗವಂತನ ಅಲೌಕಿಕ ಪ್ರಭುತ್ವವನ್ನು ಪ್ರತಿಪಾದಿಸಿರುವುದು ವಿಶೇಷ. ಮಹಾರಾಷ್ಟ್ರದ ಮುಕ್ತಾಬಾಯಿಯೂ ಇದೇ ಮಧುರಭಕ್ತಿಯಿಂದ ಕೃಷ್ಣನನ್ನು ಆರಾಧಿಸುತ್ತಾ, ಭಕ್ತಿಯ ರಸವನ್ನು ಸುರಿಸುವ ಕೀರ್ತನೆಗಳು ಇವಳಿಂದ ರಚನೆಯಾದವು.

ಹೀಗೆ ಹರಿದು ಬಂದ 'ಭಕ್ತಿ ಮತ್ತು ಮಧುರಭಾವದ' ಅಂತರಂಗವನ್ನು ಕರ್ನಾಟಕದ ಹರಿದಾಸಿಯರಲ್ಲೂ ಕಾಣಬಹುದು. ಪುರುಷ ಪ್ರಧಾನವಾದ ಮಧ್ಯಯುಗದ ಸಮಾಜದಲ್ಲಿ ಮಹಿಳಾ ಹರಿದಾಸಿಯರ ಸ್ಥಿತಿಗತಿಗಳನ್ನು ಅವಲೋಕಿಸಿದಾಗ, ಸಾಮಾನ್ಯವಾಗಿ ಈ ಸಮಯದಲ್ಲಿ ಕಂಡುಬರುವ ಹರಿದಾಸಿಯರು ಸಂಪ್ರದಾಯಸ್ಥ ಕುಟುಂಬಕ್ಕೆ ಸೇರಿದವರು. ವಿಷಾದವೆಂದರೆ ಬಾಲ್ಯ ವಿವಾಹವಾಗಿ, ಬಾಲ ವಿಧವೆಯರಾಗಿರುವವರೆ ಹೆಚ್ಚು. ಸಂಪ್ರದಾಯದ ಸೋಗಿನಲ್ಲಿ ಬದುಕು ಅರಳುವ ಮೊದಲೇ ಕಮರಿ ಹೋದ ಸ್ಥಿತಿಯಲ್ಲಿ ಇದ್ದವರು. ಇವರು. ಭಕ್ತಿಯ ಕಡಲಿನಲ್ಲಿ ಮುಳುಗಿ ತಮ್ಮ ಆರಾಧ್ಯ ದೈವವಾದ ಹರಿಯ ಅವತಾರಗಳಲ್ಲಿ ಸಾಮಾನ್ಯವಾಗಿ ಕೃಷ್ಣನ ನೆನೆದು ರಚಿಸಿರುವ ಕೀರ್ತನೆಗಳೇ ಹೆಚ್ಚಿದ್ದು, ತಮ್ಮ ಕೀರ್ತನೆಗಳಲ್ಲಿ ಭಕ್ತಿಯ ನಿವೇದನೆಯ ಜೊತೆಗೆ ಪೌರಾಣಿಕ ಘಟನೆಗಳನ್ನು ಮನೋಜ್ಞವಾಗಿ ನಿರೂಪಿಸಿದ್ದಾರೆ.

ಶಾಸ್ತ್ರೀಯ ಸಂಗೀತದಲ್ಲಿ ಯಾವುದೇ ಪರಿಣಿತಿ ಇರದಿದ್ದರೂ ಇವರನ್ನು ಹಾಡಿನ ವಿಶ್ವಕೋಶ ಎಂದರೆ ಉತ್ಪ್ರೇಕ್ಷೆಯೇನಲ್ಲ. ರಾಗದ ಛಾಯೆಯನ್ನು, ಜಾಡನ್ನು ಹಿಡಿದು ಹಾಡುವಂತಹ ಸಾಮರ್ಥ್ಯ ಉಳ್ಳವರಾಗಿದ್ದರು. ರಾಗ, ತಾಳಗಳ ಪರಿಚಯವಾಗಲಿ ಇಲ್ಲದಿದ್ದರೂ ಲಯಬದ್ಧವಾಗಿ ಹಾಡುವ ಶಕ್ತಿ ಅವರಿಗಿತ್ತು. ಶಿಕ್ಷಣವಿಲ್ಲದಿದ್ದರೂ ಕಾವ್ಯ ರಚನೆ ಹಾಗೂ ಗೇಯ ಪ್ರಯೋಗಗಳಲ್ಲಿ ಪರಿಣಿತರಾಗಿದ್ದು ಅವರ ರಚನೆಯಲ್ಲಿ ಪ್ರಾಸ, ಅನುಪ್ರಾಸಗಳ ಬಳಕೆ ಚಾತುರ್ಯಪೂರ್ಣವಾಗಿ ಮೂಡಿಬಂದಿದೆ.

ಯಾವುದೇ ಶಾಲೆಯ ಶಿಕ್ಷಣ ಅವರಿಗೆ ದೊರೆಯದೇ ಇದ್ದರೂ ಕಾರ್ಯ ಚಟುವಟಿಕೆ ಹಾಗೂ ಸೃಜನಾತ್ಮಕ ಕ್ರಿಯೆಯಲ್ಲಿ ಪುರುಷನಿಗೆ ಸರಿಸಮಾನರಾಗಿ ನಿಲ್ಲಬಲ್ಲ ಸಾಮರ್ಥ್ಯ ಹೊಂದಿದ್ದರು. ಕೆಲವೊಮ್ಮೆ ಸಮಾಜದ ಅನೀತಿ, ದುರಾಚಾರಗಳ ಖಂಡನೆಯು ಅವುಗಳಲ್ಲಿದ್ದು ಸ್ತ್ರೀ ಸ್ವಾತಂತ್ರ್ಯದ ಅಭಿವ್ಯಕ್ತಿಯ ಭಾವನೆ ಅಂದೇ ಮೊಳಕೆಯೊಡದಿತ್ತೇ ಎಂದು ಭಾಸವಾಗುತ್ತದೆ.

ಮಹಿಳಾ ಹರಿದಾಸರು ಎಲೆಮರಿಕಾಯಿಗಳಂತೆ ಇದ್ದುದ್ದರಿಂದ ಅವರ ಬಗ್ಗೆಯಾಗಲೀ ಅವರ ಸಾಹಿತ್ಯದ ಬಗ್ಗೆಯಾಗಲೀ ಸಾಕಷ್ಟು ಮಾಹಿತಿ ದೊರಕದಿರುವುದರಿಂದ ಅದರ ಪ್ರಚಾರ ಹೆಚ್ಚು ಕಂಡುಬರುವುದಿಲ್ಲ ಎಂದು ಸಂಶೋಧಕರಾದ ***ಹೆಚ್.ವಿ.ಶಾಂತಾ*** ರವರ ಅಭಿಪ್ರಾಯ. ದಾಸ ಸಾಹಿತ್ಯಕ್ಕೆ ಮಹಿಳಾ ಹರಿದಾಸಿಯರ ಕೊಡುಗೆ ಅಮೂಲ್ಯವಾದುದ್ದು. ಹರಿದಾಸರಿಗಿದ್ದ ಸ್ವತಂತ್ರ, ಅಥವಾ ಮಧುಕರ ವೃತ್ತಿಯ ಯಾವುದೇ ಅವಕಾಶವಿಲ್ಲದಂತಹ ಸಮಯ, ಮತ್ತೊಬ್ಬರ ಹಂಗಿನಲ್ಲಿ, ಸಮಾಜದ ಕಟ್ಟುಪಾಡುಗಳಿಗೆ ಬಂಧಿತವಾದಂತಹ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸ, ಗುರೂಪದೇಶ ಇಲ್ಲದೆ ಬದುಕನ್ನು ಕಟ್ಟಿಕೊಂಡವರು ಮಹಿಳಾ ಹರಿದಾಸರು. ಆದರೆ ಹದಿನಾರನೆಯ ಶತಮಾನದ ಅಂತ್ಯದ ವೇಳೆಗೆ ಬದಲಾದ

ರಾಜಕೀಯ ಹಾಗೂ ಸಾಮಾಜಿಕ ಸನ್ನಿವೇಶಗಳ ಕಾರಣಕ್ಕೆ ಗೃಹ ಬಂಧಿಗಳಂತಿದ್ದ ಸ್ತ್ರೀಯರು ಧಾರ್ಮಿಕ ಕ್ಷೇತ್ರದಲ್ಲಿ ತಮ್ಮ ಇರುವಿಕೆಯನ್ನು ತೋರಿಸಲು ಆರಂಭಿಸಿದ ಕಾರಣಕ್ಕೆ ಕಡಿಮೆ ಸಂಖ್ಯೆಯಲ್ಲಾದರೂ ಕೆಲವು ಮಹಿಳಾ ಹರಿದಾಸರು ನಮಗೆ ಕಾಣಸಿಗುತ್ತಾರೆ. ಅಂತಹ ಕೆಲವು ಮಹಿಳಾ ಹರಿದಾಸರನ್ನು ಕುರಿತು ಕೆಳಕಂಡಂತೆ ಚರ್ಚಿಸಲಾಗಿದೆ.

**ಗಲಗಲಿಯ ಅವ್ವ**

ಹರಿದಾಸ ಚಳವಳಿಯಲ್ಲಿ ಕಂಡು ಬರುವ ಪ್ರಪ್ರಥಮ ಮಹಿಳೆ ಗಲಗಲಿ ಅವ್ವ. ಕೊಪ್ಪಳ ಜಿಲ್ಲೆಯ ಭೋಗಾಪುರದಲ್ಲಿ ಜನಿಸಿದ, ಇವರ ಪೂರ್ವದ ಹೆಸರು ರಮಾಬಾಯಿ. ಭೋಗಾಪುರೇಶ ದೇವಸ್ಥಾನದ ಅರ್ಚಕರ ಮಗಳಾಗಿ ಹುಟ್ಟಿ ಗಲಗಲಿ ಮುದ್ಗಲಾಚಾರ್ಯ ಎಂಬುವವರನ್ನು ವಿವಾಹವಾದರು. ವಿವಾಹವಾದಾಗ ಹನ್ನೆರಡು ವರ್ಷ ವಯಸ್ಸಾದರೆ, ಇವರ ಗಂಡನಿಗೆ ತೊಂಬತ್ತೈದು ವರ್ಷ ವಯಸ್ಸಾಗಿತ್ತು. ಮದುವೆಯಾದ ಎಂಟು ದಿನಗಳಿಗೇ ಮರಣ ಹೊಂದಿದ ಮುದ್ಗಲಾಚಾರ್ಯರ ಐದು ಜನ ಮಲಮಕ್ಕಳಿಗೆ ಇವರೇ ತಾಯಿಯಾದರು. ತಮ್ಮ ಮಲಮಕ್ಕಳಿಂದ ಕನ್ನಡ, ಸಂಸ್ಕೃತ, ಶಾಸ್ತ್ರ, ಸಾಹಿತ್ಯ ಮೊದಲಾದವುಗಳನ್ನು ಕಲಿತು ಪಾಂಡಿತ್ಯ ಗಳಿಸಿದರು. ಪತಿವಿಯೋಗದಿಂದ ಧೃತಿಗೆಡದ ಅವ್ವನವರು ಉನ್ನತ ಶಿಕ್ಷಣವನ್ನು ಪಡೆದರು. ವಿಶೇಷವಾದ ಪಾಂಡಿತ್ಯವನ್ನು ಹೊಂದಿದ್ದ ಗಲಗಲಿ ಅವ್ವನವರನ್ನು ಮೈಸೂರಿನ ಅರಸರು ಪತಿಗೆ ನೀಡಿದ ಗೌರವಾದರವನ್ನು ಈಕೆಗೂ ನೀಡಿ ಸನ್ಮಾನಿಸಿದ್ದರು. ಇವರು 'ರಮೇಶ', 'ರವಿಯರಸು' ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ.

ಅವ್ವನವರ ಕೃತಿಗಳು ಇತರ ದಾಸರ ಕೃತಿಗಳಂತೆ ಇಲ್ಲ. ಮುಯ್ಯದ ಹಾಡುಗಳಲ್ಲೇ ವರ್ಣನೆಗಳು, ಸಂಭಾಷಣೆಗಳು, ನಿಂದಾಸ್ತುತಿಗಳು ಕಂಡ ಬರುತ್ತವೆ. ಆತ್ಮಶೋಧನೆ, ಲೋಕನೀತಿ ತತ್ವಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿಲ್ಲ. "ಅವ್ವನವರ ಕೃತಿಗಳ ಮೇಲೆ ದಾಸಕೂಟದ ಆದ್ಯ ಹರಿದಾಸರ ಹಾಡುಗಳ ಪ್ರಭಾವ ಕಂಡುಬರುವುದಿಲ್ಲ. ಆದರೆ ವಾದಿರಾಜರ 'ಲಕ್ಷ್ಮಿಶೋಬಾನೆ' ಮತ್ತು 'ವೈಕುಂಠ ವರ್ಣನೆ'ಗಳನ್ನು ನೆನಪಿಸುವ ಮಾದರಿಯಲ್ಲಿ ಮುಯ್ಯದ ಪದಗಳು ರಚಿತವಾಗಿವೆ.'[1] ಗಲಗಲಿ ಅವ್ವನವರ ಶಿಷ್ಯೆಯಾದ ಭಾಗವ್ವನೂ ಹರಿದಾಸ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆಂದರೆ ಗಲಗಲಿ ಅವ್ವನವರ ಗುರು ಕಾರುಣ್ಯವೂ ಒಂದು ಕಾರಣವಾಗಿದೆ. ದಾಸರ ಕಾಲದಲ್ಲಿ ಮಹಿಳಾಪರ ಕಾಳಜಿಯನ್ನು ಉಳ್ಳ ಕೀರ್ತನಕಾರ್ತಿಯರು ಮಹಿಳಾ ಸಂವೇದನೆಗಳನ್ನು, ಆತ್ಮನಿವೇದನೆಯನ್ನು, ಭಕ್ತಿ ಭಾವವನ್ನು ಕೀರ್ತನೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ.

'ಮುಯ್ಯದ ಪದಗಳು, ಮೋರೆಗೆ ನೀರು ತಂದ ಹಾಡು, ಶೃಂಗಾರ ತಾರತಮ್ಯ, ಬೀಗರ ಹಾಡುಗಳು' ಇವೇ ಮುಂತಾದ ಕೃತಿಗಳನ್ನು ರಚಿಸಿರುವ ಇವರು ಹೆಣ್ಣು ಲಿಂಗ ತಾರತಮ್ಯಕ್ಕೆ ಒಳಗಾಗಿ ಅಸ್ಪೃಶ್ಯರಷ್ಟೇ ಶೋಷಣೆಗೆ ಒಳಗಾದ ದುರಂತ ಜೀವಿ ಎಂಬುದನ್ನು ಅರಿತಿದ್ದರು. ಮಹಿಳೆಯ ಶೋಷಣಾಮಯ ಬದುಕಿನ ಯಾತನೆಯನ್ನು ಅನಾವರಣಗೊಳಿಸುವ ಪ್ರಯತ್ನಗಳನ್ನು ತಮ್ಮ ಕೃತಿಗಳ ಮೂಲಕ ಮಾಡುವುದನ್ನು ಗಮನಿಸಬಹುದು. ಉದಾಹರಣೆಗೆ:

[1] ವಾಣಿಶ್ರೀ.ಬಿ.ಎಂ., (2018). ಕನ್ನಡ ಮಹಿಳಾ ಹರಿದಾಸರು : ಒಂದು ಅಧ್ಯಯನ, ಪುಟ.15

*"ಕತ್ತಲೆಂಬುದು ನಿನ್ನ ಸುತ್ತಮುತ್ತಲಾಗಿರೆ*

*ಎತ್ತನೋಡಿದರು ಜನರಿಲ್ಲ*

*ಎತ್ತನೋಡಿದರು ಜನರಿಲ್ಲ ಅವರೊಳು*

*ಚಿತ್ತ ಸ್ವಾಸ್ಥ್ಯದ ಬಗಿ ಹೇಳ ಕೇಳನಾರಿ"*[2]

ಎನ್ನುತ್ತಾ, ಮಹಿಳೆ ತನ್ನ ಬದುಕಿನಲ್ಲಿ ಆವರಿಸಿಕೊಂಡಿದ್ದ ಕತ್ತಲ ಜಗತ್ತಿನಿಂದ ಹೊರಬರಲಾಗದೆ ಅಸಹಾಯಕಳಾಗಿ, ದೈವದ ಮೊರೆ ಹೋಗುತ್ತಾಳೆ ಎಂಬುದನ್ನು ನಿರೂಪಿಸುತ್ತಾ, ಪುರುಷನಿಷ್ಠ ಚಿಂತನೆ, ದೌರ್ಜನ್ಯಗಳಿಂದ ಹೊರಬರಲು, ಸಾಮಾಜಿಕ ಪರಿವರ್ತನೆಗೆ, ಪುರೋಹಿತ ಮತ್ತು ಪುರೋಹಿತಶಾಹಿ ವರ್ಗ ಮತ್ತು ಪುರುಷ ವರ್ಗದ ಚಿಂತನೆಗಳನ್ನು ಬದಲಿಸುವ ಅಪೇಕ್ಷೆಯನ್ನೂ ಹೊಂದಿರುವುದನ್ನು ಈ ಕೀರ್ತನೆಯು ಧ್ವನಿಸುತ್ತದೆ.

**ಹರಪನಹಳ್ಳಿ ಭೀಮವ್ವ**

ಬಳ್ಳಾರಿ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರ ಕೆರೆಯಲ್ಲಿ ರಘುನಾಥಾಚಾರ್ಯ ಮತ್ತು ರಾಘಮ್ಮ ದಂಪತಿಗಳ ಮಗಳಾಗಿ ಹರಪನಹಳ್ಳಿ ಭೀಮವ್ವ ಜನಿಸಿದರು. ಇವರ ಮೂಲ ಹೆಸರು ಕಮಲಾಕ್ಷಿ. ಭೀಮವ್ವನ ತಾತ ಜೋಯಿಸ ವೆಂಕಪ್ಪಾಚಾರ್ಯರು ಹರಿದಾಸರಾಗಿದ್ದರು. ಸಂಪ್ರದಾಯನಿಷ್ಠ ವಾತಾವರಣದಲ್ಲಿ ಬೆಳೆದ ಭೀಮವ್ವನಿಗೆ ಹನ್ನೊಂದು ವರ್ಷವಾಗಿದ್ದಾಗ ನಲವತ್ತೈದು ವರ್ಷದ ಮುನಿಯಪ್ಪನಿಗೆ ಮೂರನೆ ಹೆಂಡತಿಯಾಗಿ ವಿವಾಹವಾದಳು. ಹನ್ನೊಂದು ವರ್ಷದ ಹುಡುಗಿಗೆ ನಲವತ್ತೈದು ವರ್ಷದ ಮುನಿಯಪ್ಪ ಎಂಬ ವರ ಜೋಡಿಯಾದನು.

ವಿವಾಹದ ನಂತರ ಕೃಷ್ಣಾಬಾಯಿಯಾದ ಈಕೆ 35ನೇ ವಯಸ್ಸಿಗೆ ಪತಿಯ ವಿಯೋಗಕ್ಕೆ ಈಡಾದಳು. ಆನಂತರ ಆಕೆಯ ಜೀವನ ಮಾರ್ಗವೇ ಬದಲಾಯಿತು. ಅನಕ್ಷರಸ್ಥೆಯಾದ ಈಕೆಗೆ ಕಾವ್ಯ ನಿಮಾಣ ಶಕ್ತಿ ಬಂದುದೇ ಪವಾಡ! "ಏನಾದರೂ ಬರೆಯ ಬೇಕೆಂದು ಪ್ರೇರಣೆಯಾದಾಗ ಪರಮಾತ್ಮನೇ ಎದುರು ನಿಂತು ಆ ಕಥೆಯ ರೂಪದಲ್ಲಿ ಕಾಣಿಸಿ ಕೊಳ್ಳುತ್ತಿದ್ದನಂತೆ! ಒಮ್ಮೆ ನಾರದ ವೀಣೆ ಹಿಡಿದು ಶ್ರೀಕೃಷ್ಣನನ್ನು ಕರೆದುಕೊಂಡು ಬಂದನಂತೆ ಗಿದೇನೆಂದು ಭೀಮವ್ವ ಕೇಳಿದಾಗ ಸತ್ಯಭಾಮ ತನಗೆ ಕೃಷ್ಣನನ್ನು ದಾನ ಮಾಡಿದಳೆಂದು ಹೇಳಿದನಂತೆ ! ಇದೇ ಪ್ರಸಂಗ ಕೃಷ್ಣ ದಾನಾವ್ರತದಲ್ಲಿ ನಿರೂಪಿತವಾಗಿರುವುದಂತೆ! ಈಕೆಗೆ ನಾರದನೇ ಕನಸಿನಲ್ಲಿ ಬಂದು ಭೀಮೇಶ ಕೃಷ್ಣ ಎಂಬ ಅಂಕಿತ ಕೊಟ್ಟನಂತೆ! ಆದರೆ ಇವುಗಳಲ್ಲಿ ಸ್ವಲ್ಪ ಸತ್ಯಾಂಶವಿದ್ದರೂ ಅದನ್ನು ಜನ ಇನ್ನಷ್ಟು ಬೆಳೆಸಿ ದೊಡ್ಡದು ಮಾಡುತ್ತಾರೆ. ತೌರು ಮನೆಯ ಭೀಮ ಅತ್ತೆಮನೆಯ ಕೃಷ್ಣಗಳೆರೂ ಸೇರಿ ಭೀಮೇಶ ಕೃಷ್ಣ ಆಯಿತೆಂದು ಹೇಳುತ್ತಾರೆ."[3] ನಾಗರತ್ನ.ಟಿ.ಎನ್.ರವರು ಗುರುತಿಸಿರುವಂತೆ 'ಭೀಮವ್ವ 143 ಸಣ್ಣ ಹಾಡುಗಳನ್ನೂ, ನಳಚರಿತ್ರೆ, ಮುಯ್ಯದ ಹಾಡು, ಪತಿದಾನಕೊಟ್ಟ ಹಾಡು, ಶಕುಂತಲೆ ದುಷ್ಯಂತ ಮಹಾರಾಜನ ಹಾಡು, ರತಿ ಕಲ್ಯಾಣ, ಸುಭದ್ರಾ ಕಲ್ಯಾಣ ಮುಂತಾದ

---

[2] ಹಣಮಂತ ತಾಸಗಾಂವಕರ (ಸಂ). (2003). ಸಮಗ್ರ ದಾಸ ಸಾಹಿತ್ಯ ಸಂಪುಟ–7; ಪುಟ.91.

[3] ಎಚ್.ಎಸ್.ಕೆ., (1984). ದಾಸ ಸಾಹಿತ್ಯ ದರ್ಶನ, ಪುಟ.351.

ಹಾಡುಗಳನ್ನು ರಚಿಸಿದ್ದಾಳೆ." [4] ಜಡ ಸಂಪ್ರದಾಯಗಳ ಹಿಡಿತ, ಬಡತನದಿಂದ ನೊಂದ ಭೀಮವ್ವ ಅನಕ್ಷರಸ್ಥಳಾದರೂ ತನಗಾದ ನೋವು, ಅವಮಾನಗಳನ್ನು ಹಾಡಿನ ಮೂಲಕ ಅಭಿವ್ಯಕ್ತಿಸುತ್ತಿದ್ದಳು ಮತ್ತು ಪ್ರತಿಭಟಿಸುತ್ತಿದ್ದಳು. ಮಹಿಳೆಯನ್ನು ರೂಢಿ, ಸಂಪ್ರದಾಯ, ಮಡಿ, ಮೈಲಿಗೆಯೆಂದು ಶೋಷಿಸುವುದನ್ನು ತನ್ನ ಕೆಳಗಿನ ಕೀರ್ತನೆಯ ಮೂಲಕ ಹರಪನಹಳ್ಳಿ ಭೀಮವ್ವ ವಿರೋಧಿಸುತ್ತಾಳೆ.

*"ಮುಡಿಪು ಬೇಡುವುದ್ಹೇಳೊ ಎಷ್ಟು ನಿನ್ನ*
*ಬಡಿತ ತಡೆಯಲಾರೆ ಪೆಟ್ಟು ಮಡಿ*
*ಮೈಲಿಗೆಂದರೆ ಅತಿಸಿಟ್ಟು ನಾ*
*ಬಿಚ್ಚಾಡುವೆನೊ ಬೀಡ ಬಟ್ಟು ಪ್ರ*
*ಸಾದ ತೀರ್ಥ ಬೇಕಾದರೆ ಕ್ರಯಕಟ್ಟಿ ಗಂ*
*ಟ್ಯಾರಿಗೆ ಮಾಡಿವಿ ಹೇಳೆನಗಂದಿಷ್ಟು"[5]*

ಎನ್ನುತ್ತಾ, ಕ್ರೌರ್ಯವನ್ನು ಬಿಂಬಿಸುವ ವೈದಿಕಶಾಹಿ ವ್ಯವಸ್ಥೆಯ ವಿರುದ್ಧ ಸಿಟ್ಟು ಆಕ್ರೋಶವನ್ನು ವ್ಯಕ್ತಪಡಿಸುವ ಭೀಮವ್ವ, ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಮತ್ತು ಅವಮಾನವನ್ನು ಸಹಿಸಲಾರದೆ ದೈವದ ಮೊರೆ ಹೋಗುತ್ತಾಳೆ. ಮಡಿ ಮೈಲಿಗೆಯನ್ನೇ ಪೋಷಿಸುವ, ಪ್ರದರ್ಶಿಸುವ ಬ್ರಾಹ್ಮಣ್ಯವನ್ನೇ ತೀವ್ರವಾಗಿ ಖಂಡಿಸುತ್ತಾಳೆ. ಆದರೆ ಬ್ರಾಹ್ಮಣ್ಯವನ್ನು ಸಂಪೂರ್ಣವಾಗಿ ತ್ಯಜಿಸುವುದಿಲ್ಲ. ಅದರಲ್ಲಿರುವ ದೋಷಗಳನ್ನು ಮಾತ್ರ ಬದಲಾಯಿಸಲು ಶ್ರಮಿಸುತ್ತಾರೆ. ಮಹಿಳೆಯಾಗಿ ಅದರಲ್ಲು ಸಂಪ್ರದಾಯನಿಷ್ಠತೆಯನ್ನು ಪೋಷಿಸುವ ಕುಟುಂಬದಲ್ಲಿ ಹುಟ್ಟಿ ಬೆಳೆಯುವಲ್ಲಿನ ಜೀವನದ ಸಂಕಷ್ಟಗಳನ್ನು, ಮಹಿಳಾ ಶೋಷಣೆಯ ವಿವಿಧ ಮಜಲುಗಳನ್ನು ಭೀಮವ್ವ ಮನದಟ್ಟು ಮಾಡಿಸುವುದನ್ನು ಕಾಣಬಹುದು.

**ಹೆಳವನಕಟ್ಟೆ ಗಿರಿಯಮ್ಮ**

ಕ್ರಿ.ಶ.1725ರಿಂದ ಕ್ರಿ.ಶ.1750ರ ಸಮಯದಲ್ಲಿ ಹರಿದಾಸ ಸಾಹಿತ್ಯದ ಮಹಿಳಾ ಕೃತಿಕಾರರಾಗಿ, ಹರಿದಾಸಿಯಾಗಿ ಗುರುತಿಸಿಕೊಳ್ಳುವವರು ಹೆಳವನಕಟ್ಟೆ ಗಿರಿಯಮ್ಮ, ಮೂಲತಃ ಧಾರವಾಡ ಜಿಲ್ಲೆಯ ರಾಣೇಬೆನ್ನೂರಿನ ಭೀಷ್ಮಪ್ಪ ಜೋಯಿಸರ ಮಗಳಾದ ಈಕೆಗೆ ಚಿಕ್ಕವಯಸ್ಸಿನಲ್ಲಿಯೇ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ಶ್ಯಾನುಭೋಗ ಕೃಷ್ಣಪ್ಪನ ಮಗ ತಿಪ್ಪರಸರೊಂದಿಗೆ ವಿವಾಹವಾಯಿತು. ಬಾಲ್ಯದಿಂದಲೇ ಭಗವಂತನ ಭಕ್ತಿಯಲ್ಲೇ ಬೆಳೆಯುತ್ತಾ ಬಂದಿದ್ದ ಈಕೆ ವೈವಾಹಿಕ ಜೀವನದಿಂದ ವಿಮುಖಳಾದಳು. ಹೆಳವನಕಟ್ಟೆಯ ರಂಗನಾಥನನ್ನು ಆರಾಧ್ಯ ದೈವನಾಗಿ, ಅಲೌಕಿಕ ಪ್ರಭುವಾಗಿ ಸ್ವೀಕರಿಸಿ ದೈವೀಶಕ್ತಿಯಿರುವ ಸ್ತ್ರೀಯಂತೆ ಗೌರವಕ್ಕೆ ಪಾತ್ರಳಾದಳು. ಗೋಪಾಲದಾಸರ ಭೇಟಿಯಿಂದ ಸ್ಫೂರ್ತಿಪಡೆದು ಹೆಳವನಕಟ್ಟೆ ಗಿರಿಯಮ್ಮ ಎಂಬ ಮುದ್ರಿಕೆಯಲ್ಲಿ ಕೀರ್ತನೆಗಳನ್ನು ರಚಿಸಿರುವುದು ಕಂಡುಬರುತ್ತದೆ. ಅನೇಕ ಬಿಡಿ ಹಾಡುಗಳ ಜೊತೆಗೆ 'ಬ್ರಹ್ಮಕೊರವಂಜಿ, ಲವಕುಶರ ಕಾಳಗ, ಉದ್ದಾಲತನ ಹಾಡು, ಕೃಷ್ಣಕೊರವಂಜಿ,

[4] ಅದೇ. ಪುಟ.352

[5] ನಾಗರತ್ನ.ಟಿ & ಅಕ್ಕಮಹಾದೇವಿ (ಸಂ). (2003). ಸಮಗ್ರ ದಾಸ ಸಾಹಿತ್ಯ ಸಂ.19, ಪುಟ.92.

ಮುಂತಾದ ಕಥನ ಕಾವ್ಯಗಳನ್ನು, ಚಂದ್ರಹಾಸಚರಿತೆ ಮತ್ತು ಸೀತಾಕಲ್ಯಾಣ' ಎಂಬ ಕೃತಿಗಳನ್ನು ರಚಿಸಿದ್ದಾಳೆ. ಹೆಳವನಕಟ್ಟೆ ಗಿರಿಯಮ್ಮನವರ ಸಾಹಿತ್ಯಾಭಿವ್ಯಕ್ತಿಯು ಹೆಣ್ಣಿನ ಶೋಷಣಾಮಯ ಜೀವನ ದರ್ಶನ, ಪುರುಷಶಾಹಿಗಳು ಹೇರಿದ್ದ ನಿರ್ಬಂಧಗಳು, ಹೆಣ್ಣಿನ ಸಹನೆ ಮತ್ತು ಅಸಹಾಯಕತೆಯನ್ನು ಅನಾವರಣಗೊಳಿಸುತ್ತಾರೆ. 'ಯಾಕೆ ಎನ್ನನ್ನು ಬ್ರಹ್ಮ ಹುಟ್ಟಿಸಿದನೊ, ಸೃಷ್ಟಿಸಿದನೊ, ಸಾಕಿನ್ನು ಹೆಣ್ಣು ಜನ್ಮದ ಬಾಳು, ಎಂದು ಹೆಣ್ಣಾಗಿ ಹುಟ್ಟುವುದೇ ಬೇಡವೆಂದು ಹೇಳುವಲ್ಲಿ ಲಿಂಗತಾರತಮ್ಯ, ಹೆಣ್ಣಿನ ಶೋಷಣೆ, ಹೇರಲಾದ ನಿರ್ಬಂಧಗಳನ್ನು ಸಹಿಸಲಾರದ ಅಸಹನೆ ವ್ಯಕ್ತವಾಗಿರುವುದನ್ನು, ಶೋಷಣಾಮಯ ಬದುಕಿನಲ್ಲಿ ನಲುಗಿದ ಹೆಣ್ಣಿನ ಮನದ ಅಭೀಪ್ಸೆಯನ್ನು ನೇರವಾಗಿಯೇ ವ್ಯಕ್ತಪಡಿಸುತ್ತಾರೆ. ಹಾಗೆಯೇ ಆಶಾಪಾಶಕ್ಕೆ ಸಿಲುಕಿರುವ ಮನುಷ್ಯ ಜನ್ಮವನ್ನು ಮತ್ತೆ ಕೊಡದಿರೆಂದು 'ಭಾಷೆಯನ್ನು ಕೊಡು ಮುಂದಿನ ಜನ್ಮದಲಿ ಬಾರದೆಂಬಂತೆ' ಎಂದು ದೈವವನ್ನು ಬೇಡಿಕೊಳ್ಳುತ್ತಾರೆ. ಶೋಷಣಾಮಯ ಬದುಕಿನಿಂದ ಬೇಸತ್ತ ಹೆಣ್ಣು ಜೀವಗಳ ಜೀವನಗಾಥೆಯನ್ನು ಗಿರಿಯಮ್ಮ ದರ್ಶಿಸುವುದು ಹೀಗೆ,

*"ಪಾಪಿಯೊಳು ನಾ ಬಂದೆ ಪರದೇಶಿ ನಾನಾದೆ*

*ಕಾಪಾಡುವರ ಕಾಣೆ ಕೈಪಿಡಿ(ದು)*

*ಆಪತ್ತು ಬಂದ ಕಾಲಕ್ಕೆ ಆರಯ್ವರೊಬ್ಬರಿಲ್ಲ*

*ಶ್ರೀಪತಿಯೆ ಕಡೆಹಾಯಿಸೊ*

*ತಂದೆ ತಾಯೆಂಬುದನು ನಾ*

*ನೊಂದು ಗುರುತನರಿಯೆ ನಿಮ್ಮ ಕಂದ*

*ಳೆಂದೆನಿಸಿ ಕಡೆಹಾಯಿಸೊ ಹೆಳವನಕಟ್ಟೆರಂಗ"[6]*

ಗಿರಿಯಮ್ಮನವರು ಜ್ಞಾನಶೂನ್ಯತೆಯಿಂದ ಇತರ ವಿಷಯಾಸಕ್ತರಾಗಿ ನಾನು ನನ್ನದು ಎಂಬ ಭ್ರಮಾ ಲೋಕದಲ್ಲಿ ವಿಹರಿಸುವ ಮನುಜರನ್ನು ಎಚ್ಚರಿಸುವುದು ತನ್ನ ಕೆಳಗಿನ ಕೀರ್ತನೆಯ ಮೂಲಕ ಎಚ್ಚರಿಸುತ್ತಾರೆ.

*"ಜ್ಞಾನ ಶೂನ್ಯವಾಗಿ ನಾನಾ ವಿಷಯಗಳಲಿ*

*ನಾನು ನನ್ನದೆಂಬ ಹೀನ ಮಮತೆಯಿಂದ*

*ದಾನವಾರಿ ನಿನ್ನ ಧ್ಯಾನಿಸದಲೆ ಕಾಲ*

*ಸಾನುರಾಗದಿಂದ ಶ್ವಾನನಂತೆ ಕಳೆದೆ"[7]*

ಎನ್ನುತ್ತಾ 'ನಾನು' ಎಂಬ ಅಹಂಕಾರ ಭಾವವೇ ಎಲ್ಲ ಅಸಮಾನತೆಗಳ ಮೂಲ. ಮನುಷ್ಯನ ಸ್ವಾರ್ಥಪರವಾದ ಚಿಂತನೆಯಿಂದಾಗಿ ನೈತಿಕತೆಯನ್ನು ಮರೆತು, ಹರಿ ಧ್ಯಾನವನ್ನು ತೊರೆದು ವ್ಯರ್ಥವಾಗಿ ಆಯುಷ್ಯ ಕಳೆಯುವುದನ್ನು ತ್ಯಜಿಸಬೇಕೆಂಬ ಹಿತ ನುಡಿ ಕೀರ್ತನೆಯಲ್ಲಿದೆ. ಹಾಗೆಯೇ "ನಾನು ನನ್ನದು

[6] ಲೀಲಾವತಿ ಎಸ್.ರಾವ್(ಸಂ). (2003). ಸಮಗ್ರ ದಾಸ ಸಾಹಿತ್ಯ ಸಂಪುಟ–18; ಭಾಗ–1; ಪುಟ.38.

[7] ಅದೇ., ಪುಟ.129.

ಎಂಬ ಹೀನವೃತ್ತಿಗಳಿಂದ; ಹಾನಿಯಾಯಿತು ಆಯುಶ್ರೀನಿಧಿಯೆ" ಎಂದು ದೇಹದನಶ್ವರತೆಯನ್ನು, ಅಶಾಶ್ವತವಾದ ಜೀವನವನ್ನು ಅರಿತಿದ್ದರೂ ಅಸಮಾನತೆಯನ್ನು ಪೋಷಿಸುತ್ತಾ ಬಂದಿರುವುದಕ್ಕೆ ಖೇದವಿದೆ. ಅದರಲ್ಲೂ ಅಹಂಕಾರ ಮೂಲವಾದ ನಾನತ್ವವನ್ನು, ಸ್ವಾರ್ಥಪರವಾದ ನನ್ನದು ಎಂದು ಎಲ್ಲವನ್ನು ಅತಿಕ್ರಮಿಸಿಕೊಳ್ಳುವ ಗುಣವನ್ನು ತ್ಯಜಿಸುವವರೆಗೆ ಅರಿವಿನ ಮಾರ್ಗವನ್ನು ಮನುಷ್ಯ ಕಾಣಲಾರ ಎನ್ನುತ್ತಾರೆ.

ಕೃಷಿ ಪ್ರಧಾನವಾದ ಭಾರತ ದೇಶದ ಕೃಷಿ ಕ್ಷೇತ್ರಕ್ಕೆ ಬರಗಾಲವು ಇಂದಿಗೂ ಒಂದು ಪರಿಹರಿಸಲಾಗದ ಸಮಸ್ಯೆಯಾಗಿದೆ. ಆದರೆ ಇಂತಹ ವೈಜ್ಞಾನಿಕ ಯುಗದಲ್ಲೂ ಬರಗಾಲ ಬಂದಾಗ ಇರುವ ಎರಡು ದಾರಿಗಳೆಂದರೆ; ಸರ್ಕಾರವು ಪರಿಹಾರ ಕಾರ್ಯವನ್ನು ಕೈಗೊಳ್ಳುವುದು (ಅಂದಂದಿನ ಆಡಳಿತಗಾರರು ಮತ್ತು ಉದಾರೀ ಶ್ರೀಮಂತರು ಬಡವರಿಗೆ ಕಡ, ಸಾಲ, ಉದ್ದರಿಗಳನ್ನು ಕೊಡುವ ಮೂಲಕ ನೆರವಿನ ಹಸ್ತವನ್ನು ಚಾಚಿದ್ದಾರೆ.) ಮತ್ತು ಸಮಾಜ ಸುಧಾರಕರು ಮಳೆ ಬರುವವರೆಗೂ ಕಾಯುವ ಆಶಾವಾದೀ ಮನಃಸ್ಥಿತಿಯನ್ನು ನಿರ್ಮಿಸುವುದು. ಸಂತರಾದ ಹರಿದಾಸರು ಈ ಕಾರ್ಯವನ್ನು ಮಾಡಿರುವುದಕ್ಕೆ; ಅವರ 'ಮಳೆಯ ದಯಮಾಡೋ ರಂಗಯ್ಯ', ಎಂಬ ಕೀರ್ತನೆಯನ್ನು ಉದಾಹರಿಸಬಹುದು. 'ಮಳೆಯ ದಯಮಾಡೋ ರಂಗಯ್ಯ' ಎಂಬ ಕೀರ್ತನೆಯಲ್ಲಿ "ಒಂದೊಂದು ನುಡಿಯಲ್ಲಿಯೂ ಜಲಕ್ಷಾಮದ ಬೇಗೆ ಎಂತಹುದೆನ್ನುವುದು ಸ್ವಾಭಾವಿಕವಾಗಿ ಚಿತ್ರಿತವಾಗಿದೆ. ಮೂಕ ಪ್ರಾಣಿಗಳ ಪರದಾಟ, ಬತ್ತಿದ ಬಾವಿಯಿಂದ ಹೆಂಗಸರು ನೀರನ್ನು ಮೊಗೆಯುವುದು, ಮಳೆಗಾಲ ಕಳೆದರೂ ಜನರಿಗೆ ಅನಾವೃಷ್ಟಿಯಿಂದ ಬಿಡುಗಡೆಯಾಗದಿರುವುದು ಮೊದಲಾದುವು ಕಣ್ಣಿಗೆ ಕಟ್ಟಿದಂತಿದೆ. ಗಿರಿಯಮ್ಮನ ಈ ಮೊರೆಯಿಂದ ಧಾರಾಕಾರವಾಗಿ ಮಳೆ ಬಂದಿತೆಂದು ಪ್ರತೀತಿಯಿದೆ. ಬರಗಾಲದ ಚಿತ್ರಣವಂತೂ ಎದೆ ಮಿಡಿಯುವಂತಿದೆ"[8] ಎಂದರೆ ಅತಿಶಯೋಕ್ತಿಯಾಗಲಾರದು.

**ಓರಾಬಾಯಿ ಲಕ್ಷ್ಮೀದೇವಮ್ಮ**

ಬಳ್ಳಾರಿಯ ಪ್ರಸಿದ್ದ ವೈಷ್ಣವ ಮನೆತನಗಳಲ್ಲಿ 'ಓರವಾಯಿ' ಎಂಬುದೂ ಒಂದು. ಸೊಂಡೂರಿನ ದಿವಾನರಾಗಿದ್ದ ಲಕ್ಷ್ಮಣರಾಯ ಮತ್ತು ಅವರ ಪತ್ನಿ ಗೋದಾವರಿಬಾಯಿಯವರ ಏಕಮಾತ್ರ ಪುತ್ರಿಯೇ ಲಕ್ಷ್ಮೀದೇವಮ್ಮ. 1865ರಲ್ಲಿ ಜನಿಸಿದ ಇವರಿಗೆತಂದೆ ತಾಯಿಯೇ ಗುರುಗಳಾಗಿ ಮನೆಯಲ್ಲಿಯೇ ಎಲ್ಲ ವಿದ್ಯೆಗಳನ್ನು ಹೇಳಿಕೊಟ್ಟರು. ಸಂಸ್ಕೃತ ಪಾಂಡಿತ್ಯವನ್ನು ಸಂಪಾದಿಸಿಕೊಂಡ ಇವರು ತನ್ನ ಸೋದರ ಮಾವನಾದ ಓರಾಬಾಯಿ ಮಧ್ವರಾಯ ಎಂಬುವುದರೊಂದಿಗೆ ಐದನೇ ವಯಸ್ಸಿನಲ್ಲಿ ಬಾಲ್ಯ ವಿವಾಹವಾಗಿದ್ದರು. ಈ ದಂಪತಿಗಳಿಗೆ ಗಂಡು ಮಗು ಹುಟ್ಟಿ, ಆ ಮಗು ಒಂದು ವರ್ಷ ಮಾತ್ರ ಬದುಕಿತ್ತು. ಆನಂತರ ಪತಿಯ ತಂಗಿ ಭಾಗಮ್ಮನ ಮಗ ಕೃಷ್ಣಮೂರ್ತಿಯನ್ನು ದತ್ತು ಸ್ವೀಕರಿಸಿದರು. ಹೀಗೆ ಸಾಂಸಾರಿಕ ಜೀವನದ ಏರುಪೇರುಗಳನ್ನು ದಿಟ್ಟವಾಗಿ ಎದುರಿಸುತ್ತಾ ಗೃಹವೈದ್ಯ, ಗೃಹ ಕೆಲಸಗಳ ಜೊತೆಗೆ ಹರಿಯ ಗುಣಗಾನ ಮಾಡುವ ಕಥೆಗಳನ್ನು ಹಾಡುಗಳನ್ನು ಹಾಡುತ್ತಾ, 'ನರಸಿಂಹವಿಠಲ' ಎಂಬ ಅಂಕಿತದಲ್ಲಿ ಓರಾಬಾಯಿ ಲಕ್ಷ್ಮೀದೇವಮ್ಮನವರು ಕೀರ್ತನೆಗಳನ್ನು ರಚಿಸಿದ್ದು, 21 ಕೀರ್ತನೆಗಳು, 12 ಧೀರ್ಘ ಕೀರ್ತನೆಗಳು ದೊರೆತಿವೆ. ಜೊತೆಗೆ ಜಲಕ್ರೀಡೆ, ಗೊಲ್ಲತಿಯ ಹಾಡು, ಚೇಳಿನ ಹಾಡು, ದ್ರೌಪದಿ

[8] ವರದರಾಜ ರಾವ್.ಜಿ., (1987). 'ಹರಿದಾಸ ಸಾಹಿತ್ಯ ಸಾರ, ಪುಟ.59

ವಸ್ತ್ರಾಪಹರನ, ಸಕ್ಕೂಬಾಯಿ ಕಥೆ, ಶ್ರೀ ಕೃಷ್ಣ ಬಾಲಲೀಲೆ, ರಾಮದೇವರ ಹಾಡು, ಶ್ರೀ ಸತ್ಯನಾರಾಯಣ ಕಥಾ, ಸ್ವರ್ಣ ಗೌರೀ ಕಥೆ, ಮಂಗಳ ಗೌರಿ ಹಾಡು, ಸೌಗಂಧಿಕಾ ಪುಷ್ಪ, ದಿವಸೀ ಹಾಡು ಮುಖ್ಯವಾದವುಗಳಾಗಿವೆ. ಇವರ ಕೀರ್ತನೆಗಳಲ್ಲಿ ಉದಾಹರಣೆಯಾಗಿ:

***"ಅಂತ್ಯಜಳ ಕೂಡಿ ಅನಂತ ಕರ್ಮವ ಮಾಡಿ***

***ಅಂತರದಿ ನಿನ್ನೊಮ್ಮೆ ನೆನೆದನೇ ನೋ***

***ಅಂಥ ಶ್ವಪಚನ ಮಗಳ ಕಾಂತನೆಂದೆನಿಸಿದೀ***

***ಕಂತು ಪಿತನೇ ನಿನ್ನ ಕರುಣವಿದ್ದರೆ ಸಾಕೋ"[9] ಹೆಸರಿಸಬಹುದು.***

ಅಂದರೆ, ಅಜಮಿಳನು ಶ್ವಪಚಳನ್ನು ವಿವಾಹವಾಗಿ ಸುಖಕರ ಜೀವನ ನಡೆಸುತ್ತಾನೆ. ಆದರೆ ಅಜಮಿಳನನ್ನು ಸಮಾಜ ಮಾನ್ಯ ಮಾಡಿರಲಿಲ್ಲ. ಆದರೆ ಅಂತ್ಯ ಕಾಲದಲ್ಲಿ ಈತ ದೈವವನ್ನು ನೆನೆದಿದ್ದರಿಂದ ಜೀವನದಲ್ಲಿ ಸಾರ್ಥಕತೆಯನ್ನು ಪಡೆದು, ಮುಕ್ತಿಗೆ ಯೋಗ್ಯನಾಗುತ್ತಾನೆ. ಅಂತರ್ಜಾತಿ ಸಂಬಂಧವೇ ಇರಲಿ ಹರಿಯಲ್ಲಿ ನಂಬಿಕೆಯನ್ನು ಇಟ್ಟು ಅನನ್ಯ ಶರಣಾಗತಿಯಲ್ಲಿ ಸ್ತುತಿಸಿದರೆ ದೈವ ಒಲಿಯುತ್ತದೆ ಎಂದಿರುವುದು ಇವರ ಆಧ್ಯಾತ್ಮಿಕ ಚಿಂತನೆಯಲ್ಲಿನ ಔನತ್ಯವನ್ನು ಪ್ರದರ್ಶಿಸುತ್ತದೆ. ಇವರ ಕೃತಿಗಳಲ್ಲಿ "ಆದಿ ಪ್ರಾಸ, ಅಂತ್ಯಪ್ರಾಸ, ಯತಿ, ಗಣ, ಮಾತ್ರೆಗಳಿಂದ ಬದ್ಧವಾಗಿವೆ. ಹೆಚ್ಚಾಗಿ ಸಾಂಗತ್ಯ ರಗಳೆಗಳನ್ನು ಉಪಯೋಗಿಸಿದ್ದಾರೆ. ಪ್ರಕೃತಿ ವರ್ಣನೆ, ಸಂಗಾರ, ವಿಪ್ರಲಂಬ, ವೀರ, ಶೋಕ, ಕರುಣ ಇತ್ಯಾದಿ ರಸಗಳು ಚೇತೋಹಾರಿಯಾಗಿವೆ. ಉಪಮೆ, ಶ್ಲೇಷಾಲಂಕಾರಗಳು ಹೇರಳವಾಗಿವೆ"[10] ಎಂಬುದನ್ನು ಗಮನಿಸಬಹುದು.

**ಯದುಗಿರಿಯಮ್ಮ**

ಕ್ರಿ.ಶ.1828–1908ರವರೆಗೆ ಬದುಕಿ ಬಾಳಿದ ಯದುಗಿರಿಯಮ್ಮನವರು ಶ್ರೀ ವೈಷ್ಣವಧರ್ಮದ ಅನುಯಾಯಿಗಳು. ವಿವಾಹವಾಗಿ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದಿದ್ದ ಇವರು ಪತಿಯ ವಿಯೋಗದ ನಂತರ ಆಧ್ಯಾತ್ಮದ ಕಡೆ ಒಲವು ತೋರಿದರು. ಶ್ರೀರಘುಸುತ ಗುರು ಕಾರುಣ್ಯವನ್ನು ಪಡೆದುಕೊಂಡಿದ್ದ ಇವರ ಕಾರ್ಯಕ್ಷೇತ್ರ ಬೆಂಗಳೂರಿನ ಶ್ರೀ ತುಳಸಿತೋಟದ ದೇವಸ್ಥಾನವಾಗಿತ್ತು. ಯದುಗಿರಿಯಮ್ಮನವರು ಭಾರತದಾದ್ಯಂತ ಸಂಚರಿಸಿ ಶ್ರೀರಂಗ, ಕಂಚಿ, ಉಡುಪಿ, ಮೇಲುಕೋಟೆ, ಶ್ರೀವಲ್ಲಿ, ಪುತ್ತೂರು, ಶ್ರೀ ಪೆರಂಬದೂರು ಮುಂತಾದ ಕ್ಷೇತ್ರಗಳಿಗೆ ಭೇಟಿಕೊಟ್ಟಿದ್ದರು. ಎಂಬತ್ತು ವರ್ಷಗಳ ಕಾಲ ತುಂಬು ಜೀವನವನ್ನು ನಡೆಸಿ ಕೊನೆಯ ಕಾಲದಲ್ಲಿ ಮೊಮ್ಮಕ್ಕಳ ಸಹಾಯದಿಂದ ತಮ್ಮ ಸ್ಮೃತಿಯಲ್ಲಿದ್ದ ಕೀರ್ತನೆಗಳನ್ನು ಬರೆಸಿದರು. "ಯದುಗಿರಿಯಮ್ಮನವರ ಸುಮಾರು 74 ಕೀರ್ತನೆಗಳಿವೆ. ಇವರ ಕೃತಿಗಳಲ್ಲಿ ಪ್ರಪತ್ತಿಭಾವ, ವಿಶಿಷ್ಟಾದ್ವೈತ ತತ್ವದ ತಿರುಳು, ಶ್ರೀ ವೈಷ್ಣವ ಪರಿಭಾಷೆಗಳನ್ನು ಕಾಣಬಹುದು".[11] ಇವರು ಕೀರ್ತನೆಗಳ ಅಂಕಿತ 'ಮುದ್ದುವೆಂಕಟ', 'ವೆಂಕಟಕೃಷ್ಣ'. ಅಂಕಿತ ದೊರಕಿದ ಬಗ್ಗೆ, ನೀಡಿದ ಗುರುಗಳ ಬಗ್ಗೆ ದಾಖಲೆಗಳಿಲ್ಲ.

9 ರುಕ್ಮಿಣಿ ಗಿರಿಮಾಜಿ(ಸಂ). (2003). ಸಮಗ್ರ ದಾಸ ಸಾಹಿತ್ಯ ಸಂಪುಟ–18; ಭಾಗ–4; ಪುಟ.151.

10 ವಾಣಿಶ್ರೀ.ಬಿ.ಎಂ., (2018). ಕನ್ನಡ ಮಹಿಳಾ ಹರಿದಾಸರು : ಒಂದು ಅಧ್ಯಯನ, ಪುಟ.28.

11 ಅದೇ., ಪುಟ.25.

ಯದುಗಿರಿಯಮ್ಮನವರು ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಬಲ್ಲವರಾಗಿದ್ದು, ಓದಲು ಬರುತಿದ್ದು, ಸಂಸ್ಕೃತ ಭಾಷೆಯ ಪರಿಚಯವೂ ಇದ್ದಿತ್ತು. ಮನುಷ್ಯ ತನ್ನೊಳಗಿನ ಜ್ಞಾನದ ಯುಕ್ತಿಯಿಂದ ಅಹಂಕಾರ, ಕಾಮ, ಕ್ರೋಧ, ಲೋಭಗಳನ್ನು ಬಿಟ್ಟು ಅರಿವಿನ ಜ್ಞಾನವನ್ನು ಸಂಪಾದಿಸಿಕೊಳ್ಳುಬೇಕಿರುವ ಅಗತ್ಯತೆಯನ್ನು ತಿಳಿದ ಯದುಗಿರಿಯಮ್ಮನವರು ಹರಿಯನ್ನೇ ಮೊರೆಯಿಡುತ್ತಾರೆ.

***"ಘೋರಹಂಕಾರವ ಬಿಟ್ಟು ನಿನ್ನಯಪಾದ***

***ಸೇರಿಸುವುದಿನ್ನೆಂದಿಗೊ***

***ಕಾಮಕ್ರೋಧಲೋಭಮೋಹಂಗಳನ್ನೆಲ್ಲಾ***

***ದೂರಮಾಡುವುದೆಂದಿಗೆ ರಂಗಯ್ಯ***

***ಡಂಬಾಸೂಯೆ ಅವಿದ್ಯಾಸಂಬಂಧವ***

***ಬಿಟ್ಟುಬಿಡುವುದೆಂದಿಗೆ"*** [12]

ಮನುಷ್ಯನ ಮನಸ್ಸಿನಾಳದಲ್ಲಿ ಹುದುಕಿಕೊಂಡಿರುವ ದುಷ್ಟ ಚಿಂತನೆಗಳನ್ನು ನಿವಾರಿಸಿಕೊಳ್ಳುವುದು ಎಂದಿಗೆ ಸಾಧ್ಯವೆಂದು ದೈವವನ್ನೇ ಪ್ರಶ್ನಿಸುವುದು, ದಾರಿ ತಪ್ಪುತ್ತಿರುವ ಜನರನ್ನು ಎಚ್ಚರಿಸುವ ನುಡಿಗಳೇ ಆಗಿವೆ. ಮಡಿವಂತ ಮನೋಸ್ಥಿತಿಯಿಂದಾಗಿ, ಮೇಲರಿಮೆಯ ವ್ಯಸನದಿಂದಾಗಿ ಮನುಷ್ಯ ಸಹ ಮನುಷ್ಯನನ್ನು ಅಸೂಯೆ ಭಾವದಿಂದ ಕಾಣುವ, ಜ್ಞಾನ ವಿಹೀನನಾಗಿರುವುದನ್ನು, ಅಂಧಾನುಕರುಣಿಯಾಗಿ ವರ್ತಿಸುವುದರಿಂದಾಗಿಯೇ ಎಂದು ಅರಿತಿದ್ದು, ಇದರಿಂದ ವಿಮುಕ್ತಿಯನ್ನು ಪಡೆಯಲು, ಮನುಷ್ಯರನ್ನು ಬೇರ್ಪಡಿಸುವ ಚಿಂತನೆಗಳನ್ನು ಬೇರುಸಹಿತ ಕಿತ್ತೊಗೆಯುವ ಮಹದಾಸೆ ಯದುಗಿರಿಯಮ್ಮನವರದು. ಆತ್ಮಾರ್ಥಕ ಭಾವಗಳಾದ ತಾನು ತನ್ನದು ಎಂಬ ಭ್ರಾಂತಿಯನ್ನು ತ್ಯಜಿಸಿ, ಅಂತರಂಗದಲ್ಲಿಯೇ ವಿಕಾಸವನ್ನು ಹೊಂದಿ, ಸರ್ವ ಸಮರ್ಪಣಾ ಭಾವವನ್ನು ಹೊಂದಬೇಕಿರುವ ಅಗತ್ಯತೆಯನ್ನು ಯದುಗಿರಿಯಮ್ಮ ಕೆಳಕಂಡ ಕೀರ್ತನೆಯ ಮೂಲಕ ಮನದಟ್ಟು ಮಾಡಿಸುತ್ತಾರೆ.

ಮತ್ತೊಂದು ಕೀರ್ತನೆಯಲ್ಲಿ **"**ಕೆಟ್ಟನುಡಿಯ ನಿಷ್ಟುರವಾಕ್ಯಂಗಳ; ಬಿಟ್ಟುಬಿಡುವದೆಂದಿಗೊ ರಂಗಯ್ಯ**"**[13] ಎಂದು ಮನಸ್ಸಿನಲ್ಲಿ ಕೆಟ್ಟ ಆಲೋಚನೆಯಾಗಲಿ, ಮಾತಿನಲ್ಲಿ ಕೆಟ್ಟ ನುಡಿಯಾಗಲಿ, ನಿಷ್ಠೂರವಾಗಿ ಮಾತನಾಡುವುದನ್ನು ತ್ಯಜಿಸಬೇಕೆಂದಿದ್ದಾರೆ. ಸಾಂಪ್ರದಾಯಿಕತೆ, ಸದಾಚಾರ, ಆಚಾರ್ಯ ಗೌರವ, ಸಾಹಿತ್ಯ ರಚನೆ, ಕವಿತ್ವ ಎಲ್ಲವೂ ಇವರ ಕೃತಿಗಳಲ್ಲಿ ಕಂಡುಬರುವುದರಿಂದ ಯದುಗಿರಿಯಮ್ಮನವರನ್ನು ಶ್ರೀ ವೈಷ್ಣವ ಹರಿದಾಸರ ಸಾಲಿನಲ್ಲಿ ಪ್ರಮುಖ ಕೀರ್ತನಕಾರ್ತಿಯಾಗಿ ಗುರುತಿಸಲಾಗಿದೆ.

ಇವರುಗಳೇ ಅಲ್ಲದೆ 18ನೇ ಶತಮಾನದ ತರುವಾಯ ನಂಜನಗೂಡು ತಿರುಮಲಾಂಬ, ಚಿತ್ರದುರ್ಗದ ಶ್ರೀಮತಿ ಗುಂಡಮ್ಮ, ಶ್ರೀಮತಿ ಅಂಬಾಬಾಯಿ, ಶ್ರೀಮತಿ ಪಿ.ವಿ.ಕೃಷ್ಣಾಬಾಯಿ, ಬಳ್ಳಾರಿ ರಾಧಾಬಾಯಿ, ಕಳಸದ ಸುಂದರಮ್ಮ, ನೆಲಮಂಗಲದ ಸರಸ್ವತಿ ಬಾಯಿ, ದಕ್ಷಿಣ ಕನ್ನಡ ಜಿಲ್ಲೆಯ

---

12 ರುಕ್ಮಿಣಿ ಗಿರಿಮಾಜಿ(ಸಂ), (2003). ಪೂರ್ವೋಕ್ತ., ಪುಟ.29.

13 ಅದೆ., ಪುಟ.30.

ವೆಂಕಟಸುಬ್ಬಮ್ಮ, ಮುಳಿಯ ಮೂಕಾಂಬಿಕೆ, ಹಿರಿಯೂರಿನಲ್ಲಿ ರುಕ್ಮಿಣಿಬಾಯಿ, ಸರಪಾಡಿ ಗಂಗಮ್ಮ, ಸರಸ್ವತಿ ರಾಜವಾಡೆ ಮುಂತಾದವರು ಹರಿದಾಸ ಸಾಹಿತ್ಯ ಹಾಗು ಚಳವಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿರುವುದನ್ನು ಕಾಣಬಹುದು.

ಸಮಾಜ ಒಪ್ಪಿದ್ದ ಮೌಲ್ಯಗಳನ್ನು ತಾವೂ ಒಪ್ಪಿ ಸಮಾಜದ ಕಟ್ಟುಪಾಡುಗಳಿಗೆ ಒಳಗಾಗಿಯೇ ಜೀವನವನ್ನು ಸ್ವೀಕರಿಸಿದ್ದ ಮಹಿಳಾ ಹರಿದಾಸರು ವೈಷ್ಣವ ಸಮಾಜದ ಸಂಪ್ರದಾಯಗಳನ್ನು ಮುರಿಯುವ, ವ್ಯವಸ್ಥೆಯ ವಿರುದ್ದವಾಗಿ ನಿಲ್ಲುವ ಮನೋಭಾವವನ್ನು ಹೊಂದಿದವರಲ್ಲ. ಸಂಪ್ರದಾಯಶರಣರಾಗಿದ್ದ ಇವರಲ್ಲಿ ಸ್ತ್ರೀ ಸಮಾನತೆ, ಸ್ತ್ರೀಪರ ಕಾಳಜಿಗಳ ಕಲ್ಪನೆಯನ್ನೂ ಹೊಂದಿರಲಿಲ್ಲ. ಅದರಲ್ಲೂ **"**ಕಟ್ಟು ನಿಟ್ಟಿನ ವರ್ಣಾಶ್ರಮ ಧರ್ಮದ ಹಂಗನ್ನು ಕಿತ್ತೊಗೆಯಲು ಅಥವಾ ತೀವ್ರ ಸುಧಾರಣೆಗೆ ಒಳಪಡಿಸಿಕೊಳ್ಳಲು ಅವರಿಗೆ ಸಾಧ್ಯವಾಗದಿದ್ದುದು ಮತ್ತೊಂದು ಮುಖ್ಯ ಕಾರಣವಿರಬಹುದು**"**.[14] ಅಂದಿನ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರು ಇದೇ ನಮ್ಮ ಬದುಕು ಎಂದು ತಿಳಿದು ವೈಧವ್ಯ, ನೋವು ಹತಾಶೆ, ಬಡತನಗಳಿಂದ ಬೇಸತ್ತ ಇವರು ಮನಸ್ಸಿನ ನೆಮ್ಮದಿಗಾಗಿ ಧಾರ್ಮಿಕ ಸಾಹಿತ್ಯದ ಮೊರೆ ಹೋದರು. ಆತ್ಮವಿಶ್ವಾಸ, ನೈತಿಕ ಬಲ ಪಡೆಯಲು ಅನೇಕ ಪ್ರತಾದಿಗಳನ್ನು ಮಾಡುವ ಮೂಲಕ ಅವುಗಳಿಗಾಗಿ ಸಾಹಿತ್ಯ ರಚಿಸಿದರು. ಸಂಸಾರ ತಾಪತ್ರಯಗಳ ಹಿಡಿತದಿಂದ ತಾತ್ಕಾಲಿಕ ಬಿಡುಗಡೆ ಹೊಂದಲು ದೈವದ ಮೊರೆ ಹೋಗುವುದು ಅವರಿಗೆ ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ತಮ್ಮ ಸೀಮಿತ ಅನುಭವದ ನೆಲೆಯಲ್ಲಿಯೇ ಹಾಡುಗಳನ್ನು ಕಟ್ಟಿ ಮಹಿಳೆಯರಿಗಾಗಿಯೇ ಸಾಹಿತ್ಯ ರಚಿಸಿದ್ದು ಇವರುಗಳ ವೈಶಿಷ್ಟ್ಯವಾಗಿದೆ. ಅದರಲ್ಲೂ ಮಹಿಳಾ ಹರಿದಾಸರು ಶಾಸ್ತ್ರಾಭ್ಯಾಸ ಮಾಡಿದವರಲ್ಲ. ಪೂರ್ವಿಕರ ಸಂಪ್ರದಾಯ, ತಮ್ಮ ಸುತ್ತಮುತ್ತಲ ಸಮಾಜದಲ್ಲಿದ್ದ ಆಸ್ತಿಕ ವಾತಾವರಣ, ಕೀರ್ತನೆ, ಕಾವ್ಯ, ಪುರಾಣಗಳ ಶ್ರವಣದಿಂದ ಪಡೆದುಕೊಂಡ ತಿಳುವಳಿಕೆ ಇವಿಷ್ಟೆ ಇವರ ಕಾವ್ಯ ವಿದ್ಯಾ ಪರಿಜ್ಞಾನವಾಗಿತ್ತು ಎಂಬುದು ಚಿಂತನಾರ್ಹ ವಿಚಾರವಾಗಿದೆ.

18ನೇ ಶತಮಾನದಲ್ಲಿ ಸ್ತ್ರೀಯರು ಆಧ್ಯಾತ್ಮಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಪಾಲ್ಗೊಳ್ಳಲು ದೊರೆತ ವಾತಾವರಣ ಕೆಲವು ಶತಮಾನಗಳ ಕಾಲ ಸ್ತಬ್ಧವಾಗಿದ್ದ ಸ್ತ್ರೀಯರು ಎಚ್ಚರಗೊಂಡು ಮತ್ತೆ ಕೃತಿರಚನೆಗೆ ತೊಡಗಿದರು. ಅಂದಿನ ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಅಂಶಗಳ ಕಾರಣದಿಂದ ಪ್ರೋತ್ಸಾಹವೂ ದೊರೆಯಿತು. ಹತ್ತೊಂಬತ್ತು, ಇಪ್ಪತ್ತನೇ ಶತಮಾನಗಳ ಅವಧಿಯಲ್ಲಿ ಸಾಂಪ್ರದಾಯಿಕವಾಗಿ ಹರಿದಾಸ ಅಂಕಿತ ಪಡೆದು ಧಾರ್ಮಿಕ ವಲಯದಲ್ಲಿ ತಮ್ಮನ್ನು ಗುರುತಿಸಿಕೊಂಡ ಹರಿದಾಸ ಮಹಿಳೆಯರ ಸಂಖ್ಯೆ 800ನ್ನೂ ಮೀರುತ್ತದೆ. ಇವರಲ್ಲಿ ಆತ್ಮ ತೃಪ್ತಿಗಾಗಿಯೋ, ಭಕ್ತಿಯ ಅಭಿವ್ಯಕ್ತಿಗಾಗಿಯೋ ರಚನೆ ಮಾಡುತ್ತಿರುವವರು ಸಾಕಷ್ಟು ಮಂದಿ ಇದ್ದಾರೆ. ಇವರ ಸರಳ ಶೈಲಿಯ ಭಾಷೆ, ನೇರ ನಿರೂಪಣೆ ಹಾಗೂ ವೈವಿಧ್ಯಮಯ ವರ್ಣನೆಗಳಿಂದ ಕೂಡಿದ ಇವರ ಕೃತಿ ರಚನೆಗಳು ಇಂದಿಗೂ ಜನಮಾನಸದಲ್ಲಿ ನೆಲೆ ನಿಂತಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ನಾಗರತ್ನ ಟಿ.ಎನ್. (2012). *ದಾಸ ಸಾಹಿತ್ಯ ದರ್ಪಣ*, ಮೈಸೂರು ಅಭಿರುಚಿ ಪ್ರಕಾಶನ.


[14] ಲಕ್ಷ್ಮಿದೇವಿ.ಎಂ.ಆರ್., (1993). ಗಲಗಲಿ ಅವ್ವ, ಪುಟ.3

- ರಾಮಚಂದ್ರರಾವ್. (2010). *ದಾಸ ಸಾಹಿತ್ಯ ಮತ್ತು ಸಂಸ್ಕೃತಿ,* ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ.
- ನಾಗರತ್ನ.ಟಿ.ಎನ್. (2016). *ಸಮಗ್ರ ದಾಸ ಸಾಹಿತ್ಯ ಸಂಪುಟ 07,* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ಶಾಂತಾ ಹೆಚ್.ವಿ. (2017). *ದಾಸ ಸಾಹಿತ್ಯದಲ್ಲಿ ವನಿತೆಯರು,* ನವಭಾರತೀ ಪ್ರಕಾಶನ, ಮೈಸೂರು.
- ಶಾಮರಾಯ ತ.ಸು. (2010). *ಕನ್ನಡ ಸಾಹಿತ್ಯ ಚರಿತ್ರೆ,* ಉದಯರವಿ ಆಫ್ಸೆಟ್ ಪ್ರಿಂಟರ್ಸ್. ಮೈಸೂರು.
- ಶ್ರೀಮತಿರಾವ್ ಬಿ.ಕೆ. (2005). *ಮಹಿಳಾ ಹರಿದಾಸ ದರ್ಪಣ,* ಸರಸ್ವತಿ ಪ್ರಕಾಶನ, ಮೈಸೂರು.